ಕರ್ನಾಟಕ ಸರ್ಕಾರ

ಸಂಖ್ಯೆ: ಕೃಇ 09 ಕೃಉಇ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 04.07.2019.

1019A
06 JUL 2019
ತಿದ್ದುಪಡಿ

ವಿಷಯ:- ಪ್ರಧಾನ ಮಂತ್ರಿ ಕಿಸಾನ್ (Pradhan Mantri KIsan SAmman Nidhi PM-Kisan) ಯೋಜನೆ ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ಅಧಿಸೂಚಿಸುವ ಬಗ್ಗೆ

****

ಸರ್ಕಾರದ ಅಧಿಸೂಚನೆ ಸಂಖ್ಯೆ: ಕೃಇ 09 ಕೃಉಇ 2019, ದಿನಾಂಕ:15.02.2019 ರ ಅನುಬಂಧ-ಸಿ ಮತ್ತು ಅನುಬಂಧ-ಡಿ ಅನ್ನು ಈ ಕೆಳಕಂಡಂತೆ ತಿದ್ದುಪಡಿಸಿ ಪರಿಷ್ಕರಿಸಲಾಗಿದೆ. ಸದರಿ ಪರಿಷ್ಕೃತ ಅನುಬಂಧವನ್ನು ಅನುಬಂಧ-C ಎಂದು ಓದಿಕೊಳ್ಳತಕ್ಕದ್ದು ಹಾಗೂ ದಿನಾಂಕ: 17.06.2019ರಿಂದ ಪೂರ್ವಾನ್ವಯವಾಗುವಂತೆ ರೈತರ ನೋಂದಣಿ ಪ್ರಕ್ರಿಯೆಯಲ್ಲಿ ಬಳಸಬಹುದಾಗಿದೆ.

06/07/19

## PM KISAN ಯೋಜನೆಯಡಿ ರೈತರ ಸ್ವಯಂಘೋಷಣೆ

| | | | |
|---|---|---|---|
| 1 | ಅರ್ಜಿದಾರರ ಹೆಸರು | | |
| 2 | ಗುರುತುದಾರರ ವಿಧ | ಪತಿ/ ಕೋಂ/ ಮಗ/ಮಗಳು | |
| 3 | ಸಂಬಂಧದ ಹೆಸರು | | |
| 4 | ಲಿಂಗ | ಪುರುಷ/ಮಹಿಳೆ/ಇತರೆ | |
| 5 | ಅರ್ಜಿದಾರರ ವಯಸ್ಸು | | |
| 6 | ಆಧಾರ ಸಂಖ್ಯೆ | | |
| 7 | ಆಧಾರ್‌ಕಾರ್ಡ್‌ನಲ್ಲಿರುವಂತೆ ಹೆಸರು (ಕನ್ನಡ) | | |
| 8 | ಆಧಾರ್‌ಕಾರ್ಡ್‌ನಲ್ಲಿರುವಂತೆ ಹೆಸರು (ಇಂಗ್ಲಿಷ್ | | |
| 9 | ಅರ್ಜಿದಾರರ ಮೊಬೈಲ್ ಸಂಖ್ಯೆ | | |
| 10 | ವಾಸ್ತವ್ಯ ವಿಳಾಸ/ಮನೆ ಸಂಖ್ಯೆ | | |
| 11 | ವಾಸ್ತವ್ಯಗ್ರಾಮ | | |
| 12 | ವಾಸ್ತವ್ಯ ಹೋಬಳಿ | | |
| 13 | ವಾಸ್ತವ್ಯತಾಲ್ಲೂಕು | | |
| 14 | ವಾಸ್ತವ್ಯಜಿಲ್ಲೆ | | |
| 15 | ವರ್ಗ | SC / ST / OBC / ಇತರೆ | |
| 16 | ಬ್ಯಾಂಕ್‌ಖಾತೆ ಸಂಖ್ಯೆ | | |
| 17 | ಬ್ಯಾಂಕ್ ಹೆಸರು ಮತ್ತು ಶಾಖೆ | | |
| 18 | ಐ.ಎಫ್.ಎಸ್.ಸಿ (IFSC) ಸಂಖ್ಯೆ | | |
| 19 | ನನ್ನ ಹತ್ತಿರ FRUITS ನೋಂದಣಿ | ಇದೆ / ಇಲ್ಲ | ಇದ್ದರೆ ಸಂಖ್ಯೆ |
| 20 | ನನ್ನ ಹತ್ತಿರ ಪರಿಹಾರ ನೋಂದಣಿ | ಇದೆ / ಇಲ್ಲ | ಇದ್ದರೆ ಸಂಖ್ಯೆ |

PM- KISAN ಯೋಜನೆಯ ಫಲಾನುಭವಿಯಾಗಿ ಆಕಾಂಕ್ಷಿಯಾದ ನಾನು-------------------ಈ ಮೂಲಕ ಘೋಷಿಸುವುದೇನೆಂದರೆ

1. ನನ್ನ ಮತ್ತು ನನ್ನ ಕುಟುಂಬ ಸದಸ್ಯರ ಭೂ ಹಿಡುವಳಿ ವಿವರ ಈ ಕೆಳಕಂಡಂತಿದೆ: (ಪರಿಹಾರ ಅಥವಾ FRUITS ದತ್ತಾಂಶದಲ್ಲಿ ನೋಂದಣಿಯಾಗಿರದಿದ್ದರೆ ಮಾತ್ರ)

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಹೋಬಳಿ | ಗ್ರಾಮ | ಸರ್ವೆ ಸಂ | RTC ಯಲ್ಲಿ ಇರುವಂತೆ ಹಿಡುವಳಿದಾರರ ಹೆಸರು | ಹಿಡುವಳಿ ವಿಸ್ತೀರ್ಣ |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| ಒಟ್ಟು ಭೂ ಹಿಡುವಳಿ ವಿಸ್ತೀರ್ಣ | | | | | | | |

2. ನಾನು ಅಥವಾ ನನ್ನ ಕುಟುಂಬಸ್ಥರು ಸಾಂಸ್ಥಿಕ ಭೂಮಾಲಿಕರಲ್ಲ.
3. ನಾನು ಅಥವಾ ನನ್ನ ಸಂಗಾತಿ ಅಥವಾ ಮಕ್ಕಳು ಸಂವಿಧಾನಿಕ ಹುದ್ದೆ, ಮಂತ್ರಿ/ರಾಜ್ಯದ ಮಂತ್ರಿ ಸ್ಥಾನ ಅಥವಾ ಲೋಕಸಭಾ ಸದಸ್ಯತ್ವ/ ರಾಜ್ಯಸಭೆ/ರಾಜ್ಯ ಶಾಸಕಾಂಗ ಸಭೆಯ/ಪರಿಷತ್ತಿನ ಸದಸ್ಯತ್ವ/ ಅಥವಾ ಮುನಿಸಿಪಾಲಿಟಿ ಕಾರ್ಪೋರೇಷನ್ ಮೇಯರ್/ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಹುದ್ದೆಯನ್ನು ಹೊಂದಿರುವುದಿಲ್ಲ.
4. ನಾನು ಅಥವಾ ನನ್ನ ಪತಿ/ಪತ್ನಿ ಯಾವುದೇ ರಾಜ್ಯ ಸರ್ಕಾರ/ಕೇಂದ್ರ ಸರ್ಕಾರದ ಮಂತ್ರಾಲಯ/ಕಚೇರಿಗಳು/ಇಲಾಖೆಗಳು ಹಾಗೂ ಅವುಗಳ ಕ್ಷೇತ್ರ ಮಟ್ಟದ ಘಟಕಗಳು ಅಥವಾ ಕೇಂದ್ರ/ರಾಜ್ಯ ಸರ್ಕಾರದ ಸಾರ್ವಜನಿಕ ವಲಯದ ಉದ್ಯಮಗಳ ಹಾಗೂ ಸರ್ಕಾರದ ಅಧೀನದಲ್ಲಿ ಬರುವ ಕಚೇರಿಗಳು/ಸ್ವಾಯತ್ತ ಸಂಸ್ಥೆಗಳ ಹಾಲಿ ಅಥವಾ ನಿವೃತ್ತ ಗ್ರೂಪ್ ಸಿ ಮತ್ತು ಮೇಲ್ಪಟ್ಟ ನೌಕರರಾಗಿರುವುದಿಲ್ಲ. ಹಾಗೆಯೇ, ಯಾವುದೇ ಸ್ಥಳೀಯ ಸಂಸ್ಥೆಯ ಖಾಯಂ ನೌಕರರಾಗಿರುವುದಿಲ್ಲ.
5. ನಾನು ಅಥವಾ ನನ್ನ ಪತಿ/ಪತ್ನಿ ವಯೋನಿವೃತ್ತಿ ಹೊಂದಿ ಮಾಹೆಯಾನ ರೂ. 10,000/- ಅಥವಾ ಹೆಚ್ಚಿನ ಪಿಂಚಣಿ ಪಡೆಯುತ್ತಿಲ್ಲ.
6. ನಾನು ಅಥವಾ ನನ್ನ ಪತಿ/ಪತ್ನಿ ಅಥವಾ ನನ್ನ ಅಪ್ರಾಪ್ತ ವಯಸ್ಸಿನ ಮಕ್ಕಳು ಕಳೆದ ಮೌಲ್ಯಮಾಪನ ವರ್ಷದಲ್ಲಿ ಆದಾಯತೆರಿಗೆಯನ್ನು ಸಂದಾಯ ಮಾಡಿರುವುದಿಲ್ಲ.
7. ನಾನು ಅಥವಾ ನನ್ನ ಪತಿ/ಪತ್ನಿ ವೈದ್ಯರು, ಅಭಿಯಂತರರು, ವಕೀಲರು, ಚಾರ್ಟರ್ಡ್ ಅಕೌಂಟೆಂಟ್ಗಳು ಹಾಗೂ ವಾಸ್ತುಶಿಲ್ಪ ಮುಂತಾದ ವೃತ್ತಿಪರ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವುದಿಲ್ಲ ಅಥವಾ ಈ ಕ್ಷೇತ್ರಗಳ ವೃತ್ತಿಪರ ಸಂಘ/ಸಂಸ್ಥೆಗಳೊಂದಿಗೆ ನೋಂದಣಿಯಾಗಿರುವುದಿಲ್ಲ.

8. ಮೇಲ್ಕಂಡ ಎಲ್ಲಾ ಮಾಹಿತಿಯು ನಿಜ ಹಾಗೂ ಸಂಪೂರ್ಣವಾಗಿರುತ್ತದೆ ಎಂದು ದೃಢೀಕರಿಸುತ್ತೇನೆ. ಈ ಮಾಹಿತಿಯು ತಪ್ಪು, ಅಪೂರ್ಣ ಹಾಗೂ ಸುಳ್ಳು ಎಂದು ಕಂಡು ಬಂದಲ್ಲಿ ಅಥವಾ ತಪ್ಪಾದ ಸ್ವಯಂ ಘೋಷಣೆ ಎಂದು ಕಂಡು ಬಂದಲ್ಲಿ/ಸಾಬೀತಾದಲ್ಲಿ, ಯೋಜನೆಯಡಿ ಪಡೆಯಲಾದ ಸೌಲಭ್ಯವನ್ನು ಹಿಂದಿರುಗಿಸಲು ಹೊಣೆಗಾರನಾಗಿರುತ್ತೇನೆ/ಬದ್ಧನಾಗಿರುತ್ತೇನೆ ಹಾಗೂ ಕಾನೂನಿನ ಪ್ರಕಾರ ದಂಡನೆಗೆ ಒಳಗಾಗಲು ಹೊಣೆಗಾರನಾಗಿರುತ್ತೇನೆ.

9. ನನ್ನ ಆಧಾರ್ ಸಂಖ್ಯೆ ಸೇರಿದಂತೆ ಗುರುತಿನ ಮಾಹಿತಿ (Identity information) ಹಾಗೂ ಇತರೆ ಮಾಹಿತಿಗಳನ್ನು ಯುಐಡಿಎಐ ನೊಂದಿಗೆ ಹೌದು/ಇಲ್ಲ ದೃಢೀಕರಣಕ್ಕೆ (Yes/No Authentication) ಹಾಗೂ FRUITS ದತ್ತಾಂಶದಲ್ಲಿ seed ಮಾಡಲು ಮತ್ತು ಆಧಾರ್ ಸಂಖ್ಯೆಯನ್ನು ಶೇಖರಿಸಲು ಸೇರಿದಂತೆ ಇತರೆ ಸರ್ಕಾರದ ವಿವಿಧ ಇಲಾಖೆಗಳ ಕಲ್ಯಾಣ ಯೋಜನೆಗಳಿಗೆ ಒದಗಿಸಲು, seed ಮಾಡಲು ನನ್ನ ಸಹಮತಿಯನ್ನು ಈ ಮೂಲಕ ನೀಡಿದ್ದೇನೆ.

ದಿನಾಂಕ: ರೈತರ ಸಹಿ

ಭೌತಿಕ ಘೋಷಣೆಗಳನ್ನು ನಿಯತಕಾಲಿಕವಾಗಿ ತಾಲ್ಲೂಕು ಮಟ್ಟದ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಪರಿಶೀಲಿಸಲು ಮತ್ತು ಸಂರಕ್ಷಿಸಲು ಕಳುಹಿಸಲಾಗುವುದು"

ಉಳಿದಂತೆ ಸದರಿ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagarathnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

04/07/19

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.

4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ) ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ. ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬೆಂಗಳೂರು.
12. ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.
13. ಕೃಷಿ ಆಯುಕ್ತರು,/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
14. ಆಯುಕ್ತರು, ತೋಟಗಾರಿಕೆ ಇಲಾಖೆ, ಬೆಂಗಳೂರು.
15. ಆಯುಕ್ತರು, ರೇಷ್ಮೆ ಇಲಾಖೆ, ಬೆಂಗಳೂರು.
16. ಡೆಪ್ಯುಟಿ ಡೈರೆಕ್ಟರ್ ಜನರಲ್ & ಸ್ಟೇಟ್ ಇನ್ಫರ್ಮ್ಯಾಟಿಕ್ಸ್ ಆಫೀಸರ್, ಬೆಂಗಳೂರು
17. ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ ಸದಸ್ಯರು ಬೆಂಗಳೂರು.
18. ವ್ಯವಸ್ಥಾಪಕ ನಿರ್ದೇಶಕರು, ಅಪೆಕ್ಸ್ ಬ್ಯಾಂಕ್, ಬೆಂಗಳೂರು.
19. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
20. ಎಲ್ಲಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರು.
21. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
22. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
23. ನಿರ್ದೇಶಕರು, TNMC, ಖನಿಜ ಭವನ ಬೆಂಗಳೂರು.
24. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ– 4&5), ಆರ್ಥಿಕ ಇಲಾಖೆ, ಬೆಂಗಳೂರು
25. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
26. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

(ಕಂಡಿಕೆ 16ರಿಂದ 20ರವರೆಗೆ ಕೃಷಿ ಆಯುಕ್ತರ ಮುಖಾಂತರ ಹೊರಡಿಸುವುದು)